ಹೇಳುತ್ತಾ ಬರುತ್ತಿದ್ದೀರಿ. ಎಲ್ಲಿಯವರೆಗೂ ಬಂದಿದೆ ಕಾದಂಬರಿ ಬರವಣಿಗೆ?

ಪ್ರಾರಂಭದಿಂದಲೂ ನನಗೆ ಕಾದಂಬರಿ ಬರೆಯಬೇಕೆನ್ನುವ ಆಸೆ ಇದ್ದೇ ಇದೆ. ಬಯಲು ಸೀಮೆಯ ಒಟ್ಟು ಬದುಕನ್ನು ಎರಡು ಕಾದಂಬರಿಗಳ ಮೂಲಕ ಅನಾವರಣಗೊಳಿಸುವ ಆಸೆಯಿದೆ. ಕಾದಂಬರಿಯ ರೂಪುರೇಷೆ ಸಣ್ಣಪುಟ್ಟ ವಿವರಗಳ ಸಮೇತ ನನ್ನ ತಲೆಯಲ್ಲಿ ಭದ್ರವಾಗಿ ಕೂತಿದೆ. ಅದಕ್ಕೆ ಬೇಕಾದ ನೋಟ್ಸ್ ಕೂಡ ಮಾಡಿಟ್ಟುಕೊಂಡಿದ್ದೇನೆ. ಪ್ಲೇಗ್ ಬಗೆಗಿನ ಆ ಕಾದಂಬರಿ ನನ್ನ ಅಜ್ಜಿಯ ಕಣ್ಣಿನ ಮೂಲಕದ ಕಥೆ. ಅದೇನು ಕಾಕತಾಳೀಯವೋ ಏನೋ, ಆ ಕಾದಂಬರಿ ಬರೆಯಬೇಕು ಎಂದು ಹೊರಟಾಗಲೆಲ್ಲ ನನಗೆ ಒಂದಿಲ್ಲೊಂದು ರೀತಿ ಪ್ರಾಣಾಂತಿಕವಾದ ಪೆಟ್ಟು ಬೀಳುತ್ತಿದೆ. ಹಾಗಾಗಿ ಅದು ಮುಂದೆ ಹೋಗುತ್ತಲೇ ಇದೆ. ಆದರೂ ಬರೆದೇ ತೀರುತ್ತೇನೆ.

◆ **ಸಾಹಿತ್ಯ, ಚಳವಳಿ, ಸಂಸ್ಕೃತಿ ಚಿಂತನೆ, ಸಂಶೋಧನೆಗಳ ನಡುವೆ ಸಿನಿಮಾ ಮಾಯೆ ನಿಮ್ಮನ್ನು ಆವರಿಸಿದ್ದು ಹೇಗೆ?**

ತುಂಬ ಚಿಕ್ಕ ವಯಸ್ಸಿನಿಂದಲೇ ಸಿನಿಮಾ, ನಾಟಕ ಮುಂತಾದ ಪ್ರದರ್ಶನ ಕಲೆಗಳ ಬಗ್ಗೆ ನನಗೆ ಪ್ಯಾಷನ್ ಇತ್ತು. ನಂತರದ ದಿನಗಳಲ್ಲಿ ಹೊಟ್ಟೆಪಾಡಿನ ಕೆಲಸ ಅಂತಾನೋ ಆಸಕ್ತಿಯಿಂದಾನೋ ಒಂದಷ್ಟು ಸಿನಿಮಾಗಳಿಗೆ ಸಂಭಾಷಣೆ, ಹಾಡು ಬರೆದಿದ್ದೇನೆ. ಆದರೆ ಅವುಗಳು ನನ್ನ ಸಿನಿಮಾಗಳಲ್ಲ. ಅಂದರೆ ನಾನು ಬದುಕನ್ನು, ಸಿನಿಮಾ ಮಾಧ್ಯಮವನ್ನು ಗ್ರಹಿಸಿದ ರೀತಿಯಲ್ಲಿರುವ ಚಿತ್ರಗಳಲ್ಲ. ಹಾಗಾಗಿ ನನ್ನದೇ ಆದ ಒಂದು ಸಿನಿಮಾ ನಿರ್ದೇಶಿಸಬೇಕು ಅನ್ನುವ ದೊಡ್ಡ ಆಸೆ ಇದೆ. ಇವತ್ತಿನ ಭಾರತದ ಸಾಂಸ್ಕೃತಿಕ ವಾತಾವರಣವೇ ಅವನತಿಗೊಂಡಿದೆ ಎನ್ನುವುದನ್ನು ಸಮರ್ಥವಾಗಿ ದೃಶ್ಯ ಮಾಧ್ಯಮಕ್ಕೆ ತರಬೇಕು ಎನ್ನುವ ಉದ್ದೇಶದ್ದು ಆ ಪ್ರಯತ್ನ.

> ಎಡಪಂಥೀಯ ನಿಲುವನ್ನು ಇಟ್ಟುಕೊಂಡ, ಆಂಟಿ ಎಸ್ಟಾಬ್ಲಿಷ್‌ಮೆಂಟ್ ಧೋರಣೆಯ, ಭಾರತೀಯ ಭೌತವಾದದ ತತ್ವಗಳನ್ನು ಅರ್ಥ ಮಾಡಿಕೊಂಡ ಒಬ್ಬ ವ್ಯಕ್ತಿ ನಿಜಕ್ಕೂ ಅಧ್ಯಾತ್ಮವಾದಿಯಾಗೋದಕ್ಕೆ ಹೇಗೆ ಸಾಧ್ಯವಾಗುತ್ತೆ... ಸುಲಭಕ್ಕೆ ಬಗೆಹರಿಸಿಕೊಳ್ಳಲಾಗದ ಕಠಿಣ ಜಿಜ್ಞಾಸೆ ಅದು.

◆ **ನೀವು ನಿಮ್ಮ ಉಳಿದ ಜೀವಿತಾವಧಿಯಲ್ಲಿ ಮುಖ್ಯವಾಗಿ ಮಾಡಲೇಬೇಕು ಅಂದುಕೊಂಡಿರೋ ಕೆಲಸಗಳ್ಯಾವುವು?**

ಒಂದು, ಈಗ ನಾನು ಮಾಡುತ್ತಿರುವಂಥ 'ಸಂಸ್ಕೃತಿ–ಇತಿಹಾಸದ ಮಹಾಮರೆವು' ಇದೆಯಲ್ಲ, ಅದಕ್ಕೆ ಸಂಬಂಧಿಸಿದ ಲಿಟರೇಚರ್ ಎರಡು ಮೂರು ಸಂಪುಟಗಳಿಗಾಗುವಷ್ಟಿದೆ; ಅದನ್ನು ಬರೆದು ಮುಗಿಸಬೇಕು. ಎರಡನೇದು, ಅದನ್ನೇ ಆಧಾರವಾಗಿಟ್ಟುಕೊಂಡು ಒಂದು ಗಂಟೆ ಅವಧಿಯ ಎರಡು ಸಾಕ್ಷ್ಯಚಿತ್ರಗಳನ್ನು ಮಾಡಬೇಕು; ಅದನ್ನು ಬೇರೆ ಬೇರೆ ಭಾಷೆಗಳಲ್ಲೂ ತರಬೇಕು. ಮೂರನೇದು, ಇಲ್ಲಿನ ತಳಸಮುದಾಯಗಳ ಸಾಂಸ್ಕೃತಿಕ ಜಗತ್ತನ್ನು ಇಟ್ಟುಕೊಂಡು ಒಂದೆರಡು ಡಾಕ್ಯುಮೆಂಟರಿ ಮಾಡಬೇಕು. ಉಳಿದಂತೆ ಕಾವ್ಯ, ನಾಟಕ, ಸಿನಿಮಾ ಇತ್ಯಾದಿ ಕೆಲಸಗಳು ಬಾಕಿ ಇವೆ. ●